**SC No. 137/2020**
**PW-15**

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

## ಎಸ್. ಸಿ. 137/2020

| | | |
|---|---|---|
| ಸಾಕ್ಷಿದಾರರ ಹೆಸರು | ಗಂಗಾಧರ ಎಸ್. | ಪ್ರಮಾಣ ವಚನ ಮಾಡಿದ ದಿನಾಂಕ: 07.01.2026 |
| ತಂದೆಯ/ಗಂಡನ ಹೆಸರು | ಲೇಟ್ ಸಣ್ಣಯ್ಯ | |
| ವಯಸ್ಸು | 48 ವರ್ಷ | |
| ವೃತ್ತಿ | ಪೊಲೀಸ್ ಇನ್ಸ್‌ಪೆಕ್ಟರ್ , ಹೆಚ್.ಡಿ ಕೋಟೆ | ಪ್ರಾ.ಸಾಃ 15 |
| ವಾಸ ಸ್ಥಳ | ಹೆಚ್.ಡಿ ಕೋಟೆ | ಚಾ.ಸಾಃ 24 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ಲಕ್ಷ್ಮೀಪುರಂ ಪೊಲೀಸ್ ಠಾಣೆಯಲ್ಲಿ ಜನವರಿ *2019* ರಿಂದ ಮಾರ್ಚ್ *2020* ರವರೆಗೆ ಪೊಲೀಸ್ ಇನ್ಸ್‌ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿದ್ದೆನು.

ದಿನಾಂಕ 21.08.2019 ರಂದು ಬೆಳಗ್ಗೆ 08.45 ಗಂಟೆ ಸಮಯದಲ್ಲಿ ಪಿರ್ಯಾದಿ ಪ್ರಭಾ ರವರು ಠಾಣೆಗೆ ಹಾಜರಾಗಿ ಬೆರಳಚ್ಚು ಮಾಡಿದ ದೂರನ್ನು ನೀಡಿದ್ದು ಅದನ್ನು ಸ್ವೀಕರಿಸಿ ಠಾಣಾ ಮೊ.ಸಂಖ್ಯೆ 50/2019 ಕಲಂ 392 ಐಪಿಸಿ ರೀತ್ಯ ಪ್ರಕರಣವನ್ನು ದಾಖಲು ಮಾಡಿಕೊಂಡಿದ್ದೆನು. ಪ್ರ.ವ.ವರದಿ ಹಾಗೂ ದೂರನ್ನು ನ್ಯಾಯಾಲಯಕ್ಕೆ ಹಾಗುಸ ಸದರಿ ಪ್ರತಿಗಳನ್ನು ನನ್ನ ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿದ್ದೆನು. ಸಾಕ್ಷಿದಾರರು

ಪ್ರ.ವ.ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ–19** ಎಂದು ಸಾಕ್ಷಿದಾರರ ಸಹಿಯನ್ನು **ನಿಪಿ–19(ಎ)** ಎಂದು ಗುರುತಿಸಲಾಯಿತು. ಸಾಕ್ಷಿದಾರರು ದೂರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.4 ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿದಾರರ ಸಹಿಯನ್ನು **ನಿಪಿ.4 (ಬಿ)** ಎಂದು ಗುರುತಿಸಲಾಯಿತು.

ನಂತರ ನಾನು ಕೃತ್ಯ ನಡೆದ ಸ್ಥಳ ಕ್ಕೆ ಭೇಟಿ ಕೊಟ್ಟು ಪಂಚರಾದ ಮಹೇಶ್ವರ ಮತ್ತು ಶ್ರೀಕಾಂತ್ ರವರನ್ನು ಬರಮಾಡಿಕೊಂಡು ಅವರುಗಳ ಸಮಕ್ಷಮ ಪಿರ್ಯಾದುದಾರರು ತೋರಿಸಿದ ಕೃತ್ಯ ನಡೆದ ಸ್ಥಳ ದಲ್ಲಿ ಸ್ಥಳ ಪಂಚನಾಮೆಯನ್ನು ಬೆಳಗ್ಗೆ 9.00 ಗಂಟೆಯಿಂದ 9.30 ಗಂಟೆಯವರೆಗೆ ಜರುಗಿಸಿದ್ದೆನು. ಕೃತ್ಯ ನಡೆದ ಸ್ಥಳ ದಲ್ಲಿ ಕೃತ್ಯಕ್ಕೆ ಬಳಸಿದ್ದ ಒಂದು ಕಾಫಿ ಕಲರ್ ರಾಮರಾಜ್ ನಿಕ್ಕರ್ ಟೈಪ್ ಅಂಡರ್ ವೇರ್ ಬಟ್ಟೆಯನ್ನು ಅಮಾನತ್ತು ಪಡಿಸಿಕೊಂಡಿದ್ದೆನು. ಸಾಕ್ಷಿದಾರರು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.5 ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿದಾರರ ಸಹಿಯನ್ನು ನಿಪಿ.5(ಸಿ) ಎಂದು ಗುರುತಿಸಲಾಯಿತು. ಸಾಕ್ಷಿದಾರರು ನ್ಯಾಯಾಲಯದ ಮುಂದೆ ಇರುವ ಕಾಫಿ ಕಲರ್ ರಾಮರಾಜ್ ನಿಕ್ಕರ್ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಎಂ.ಒ–1 ಎಂದು ಗುರುತಿಸಲ್ಪಟ್ಟಿರುತ್ತದೆ. ನಂತರ ಠಾಣೆಗೆ ಬಂದು ವಶಪಡಿಸಿಕೊಂಡಿದ್ದ ಮಾಲನ್ನು ಮಾಲುಪಟ್ಟಿ ಸಂಖ್ಯೆ 48–A/2019 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೆನು. ಅದೇ ದಿನ ಪಂಚ ಸಾಕ್ಷಿದಾರರ ಹೇಳಿಕೆಗಳನ್ನು

ಪಡೆದುಕೊಂಡಿದ್ದೆನು. ಇತರೆ ಸಾಕ್ಷಿದಾರರಾದ ಮೋಹನ್ ಕುಮಾರ್, ಮಹದೇವ್, ಪ್ರಕಾಶ್, ಮನೋಜ್ ಮತ್ತು ಗಾಯಾಳು ನಾಗರತ್ನ ರವರ ಹೇಳಿಕೆಯನ್ನು ಪಡೆದುಕೊಂಡಿದ್ದೆನು. ಆರೋಪಿತನ ಪತ್ತೆಗಾಗಿ ಸಿಬ್ಬಂದಿಯವರನ್ನು ನೇಮಿಸಿದ್ದು ಅದರಂತೆ ಮಧ್ಯಾಹ್ನ 1.30 ರ ಸುಮಾರಿಗೆ ಸಿಬ್ಬಂದಿಗಳಾದ ಉಮೇಶ್, ಸುದೀಪ್ ರವರು ಆರೋಪಿ ರೆಹಮಾನ್ ಶರೀಫ್ ರವರನ್ನು ವಶಕ್ಕೆ ಪಡೆದುಕೊಂಡು ನನ್ನ ಮುಂದೆ ಮಧ್ಯಾಹ್ನ 1.30 ಗಂಟೆಗೆ ಹಾಜರುಪಡಿಸಿ ವರದಿ ನೀಡಿದ್ದರು. ಸಾಕ್ಷಿದಾರರು ವರದಿಯನ್ನು ನೊಡಿ ಗುರುತಿಸಿದ್ದು ಅದನ್ನು **ನಿಪಿ–20** ಎಂದು ಸಾಕ್ಷಿದಾರರ ಸಹಿಯನ್ನು **ನಿಪಿ–20(ಎ)** ಎಂದು ಗುರುತಿಸಲಾಯಿತು. ನಂತರ ಆರೋಪಿತನನ್ನು ವಿಚಾರಣೆಗೆ ಒಳಪಡಿಸಿ ಆತನ ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿದ್ದೆನು. ಆರೋಪಿತನು ತನ್ನ ಸ್ವ ಇಚ್ಛಾ ಹೇಳಿಕೆಯಲ್ಲಿ ತಾನು ಅಜ್ಜಿಯಿಂದ ಕಿತ್ತು ತಕೊಂಡು ಹೋಗಿದ್ದ 7 ಚಿನ್ನದ ಬಳೆಗಳನ್ನು ಕಿತ್ತುಕೊಂಡು ಹೋಗಿದ್ದು ಅವುಗಳನ್ನು ಕವರ್ ನಲ್ಲಿ ಹಾಕಿ ಯಾರಿಗೂ ಕಾಣದಂತೆ ಇಟ್ಟಿರುತ್ತೇನೆ ಬಂದರೆ ಆ ಸ್ಥಳ ವನ್ನು ತೋರಿಸುವುದಾಗಿ ಹೇಳಿದನು ಸಾಕ್ಷಿದಾರರು ನೋಡಿ ಗುರುತಿಸಿದ ಆರೋಪಿತನ ಸ್ವ ಇಚ್ಛಾ ಹೇಳಿಕೆಯನ್ನು **ನಿಪಿ–21** ಎಂದು ಗುರುತಿಸಲಾಯಿತು, ಸಾಕ್ಷಿದಾರರ ಸಹಿಯನ್ನು **ನಿಪಿ–21(ಎ)** ಎಂದು ಗುರುತಿಸಲಾಯಿತು. ಆರೋಪಿತನು ಹೇಳಿದಂತಹ ಸ್ಥಳ ಕ್ಕೆ ಆರೋಪಿತನನ್ನು ಮತ್ತು ಪಂಚರಾದ ಚಂದ್ರಶೇಖರ್ ಮತ್ತು ಅಭಿಶೇಕ್ ರವರೊಂದಿಗೆ ಆರೋಪಿತನು ತೋರಿಸಿದಂತಹ ನರಸರಾಜ ರಸ್ತೆಯಲ್ಲಿ ಇರುವ ಮನುವನ ಪಾರ್ಕ್

ಕಾಂಪೋಂಡ್ ನ ಪಾದಾಚಾರಿ ರಸ್ತೆಯಲ್ಲಿ ಕಾಂಪೋಂಡ್ ಗೆ ಹೊಂದಿಕೊಂಡಂತೆ ಇರುವ ತಳ್ಳುವ ಹಣ್ಣಿನ ಗಾಡಿಯ ಪಕ್ಕದಲ್ಲಿ ಇದ್ದಂತಹ ಟೈಲ್ಸ್ ಕೆಳ ಭಾಗದಲ್ಲಿ ಒಂದು ಕವರ್ ನಲ್ಲಿ ಅವಿಸಿ ಇಟ್ಟಿದ್ದ ವಸ್ತುಗಳನ್ನು ಹಾಜರುಪಡಿಸಿದ್ದು ಸದರಿ ವಸ್ತುಗಳು 7 ಚಿನ್ನದ ಬಳೆಗಳು ಇದ್ದು ಅವುಗಳನ್ನು ಪಂಚರ ಸಮಕ್ಷಮ ಮಹಜರ್ ಮುಖಾಂತರ ಅಮಾನತ್ತು ಪಡಿಸಿಕೊಂಡಿದ್ದೆನು. ಸದರಿ ಮಹಜರ್ ಅನ್ನು ಮಧ್ಯಾಹ್ನ 3.45 ರಿಂದ 4.30 ರವರೆಗೆ ಮಾಡಿದ್ದೆನು. ಸಾಕ್ಷಿದಾರರು ಅಮಾನತ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.13 ಎಂದು ಗುರುತಿಸಲ್ಪಟ್ಟಿದು,ಸಾಕ್ಷಿದಾರರ ಸಹಿಯನ್ನು **ನಿಪಿ.13(ಬಿ)** ಎಂದು ಗುರುತಿಸಲಾಯಿತು. ಸಾಕ್ಷಿದಾರರು ಸ್ಥಳ ದಲ್ಲಿ ತೆಗೆದ ಫೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-14 ಎಂದು ಗುರುತಿಸಲ್ಪಟ್ಟಿರುತ್ತದೆ. 7 ಚಿನ್ನದ ಬಳೆಗಳ ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-6 ಮತ್ತು 7 ಎಂದು ಗುರುತಿಸಲ್ಪಟ್ಟಿರುತ್ತವೆ.

ನಂತರ ಠಾಣೆಗೆ ಬಂದು ವಶಪಡಿಸಿಕೊಂಡಿದ್ದ ಮಾಲುಗಳನ್ನು ಮಾಲು ಪಟ್ಟಿ ಸಂಖ್ಯೆ 49/19 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೆನು.

ನಂತರ ಆರೋಪಿತನನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಿದ್ದೆನು.

ದಿನಾಂಕ 22.08.2019 ರಂದು ಕೃತ್ಯ ನಡೆದ ಸ್ಥಳ ಕ್ಕೆ ಆರೋಪಿತ ಹೋಗಿರುವ ಬಗ್ಗೆ ಕೃತ್ಯ ನಡೆದ ಸ್ಥಳ ದ ಪಕ್ಕದಲ್ಲಿರುವ ಓಂಕಾರ್ ಸೆಕಂಡ್ಸ್ ಕಾರ್ ಶೋರೂಂ ಗೆ ತೆರಳಿ ಅಲ್ಲಿನ

ಸಿಸಿಟಿವಿ ಕ್ಯಾಮೆರಾವನ್ನು ಪರಿಶೀಲನೆ ಮಾಡಿದ್ದೆವು. ಆ ಸಿಸಿಟಿವಿ ಕ್ಯಾಮೆರಾದಲ್ಲಿ ಆರೋಪಿತ ಓಡಾಡಿದ ಬಗ್ಗೆ ಫುಟೇಜ್ ದೊರಕಿದ್ದು ಅಲ್ಲಿಗೆ ಪಂಚರಾದ ಮಹೇಶ್ ಮತ್ತು ವಿಪುಲ್ ರವರ ಸಮಕ್ಷಮ ಮತ್ತು ಓಂಕಾರ್ ಸೆಕಂಡ್ಸ್ ಕಾರ್ ಶೋರೂಂ ಅಲ್ಲಿನ ಟೆಕ್ನಿಶಿಯನ್ ಆಗಿದ್ದ ಮೆಹರ್ ಅಹಮದ್ ರವರು ಸಿಸಿಟಿವಿ ಕ್ಯಾಮೆರಾದಲ್ಲಿ ಇದ್ದಂತಹ ಫುಟೇಜ್ ಗಳನ್ನು ಒಂದು ಸೋನಿ ಸಿಡಿ ಗೆ ಕಾಪಿ ಮಾಡಿ ಕೊಟ್ಟಿದ್ದು ಅದನ್ನು ಪಂಚರ ಸಮಕ್ಷಮ ಮಹಜರ್ ಮುಖೇನ ಅಮಾನತ್ತು ಪಡಿಸಿಕೊಂಡಿದ್ದೆನು ಮತ್ತು ಮೆಹರ್ ಅಹಮದ್ ರವರು ಭಾರತೀಯ ಸಾಕ್ಷ್ಯ ಅಧಿನಿಯಮ 65–ಬಿ ಪ್ರಕಾರ ಪ್ರಮಾಣ ಪತ್ರವನ್ನು ಕೊಟ್ಟಿದ್ದರು. ಸಾಕ್ಷಿದಾರರು ಸೋನಿ ಸಿಡಿ ಗಳನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ–12 ಮತ್ತು 18 ಎಂದು ಗುರುತಿಸಲ್ಪಟ್ಟಿರುತ್ತವೆ. ಸಾಕ್ಷಿದಾರರು ಫೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ–8 ಅಂತ ಗುರುತಿಸಲ್ಪಟ್ಟಿರುತ್ತದೆ. ಠಾಣೆಗೆ ಬಂದು ವಶಪಡಿಸಿಕೊಂಡಿದ್ದ ಮಾಲುಗಳ ಬಗ್ಗೆ ಮಾಲು ಪಟ್ಟಿ ಸಂಖ್ಯೆ 58/19 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೆನು. ಅದೇ ದಿನ ಪಂಚ ಸಾಕ್ಷಿದಾರರ ಹೇಳಿಕೆ ಮತ್ತು ಮೆಹರ್ ಅಹಮದ್ ರವರ ಹೇಳಿಕೆಯನ್ನು ಪಡೆದುಕೊಂಡಿದ್ದೆನು. ಸಾಕ್ಷಿದಾರರು 65–ಬಿ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.16 ಎಂದು ಗುರುತಿಸಲ್ಪಟ್ಟಿದು, ಸಾಕ್ಷಿದಾರರ ಸಹಿಯನ್ನು ನಿಪಿ.16(ಬಿ) ಎಂದು ಗುರುತಿಸಲಾಯಿತು.

ದಿನಾಂಕ 24.08.2019 ರಂದು ಬೆಳಗ್ಗೆ 8.45 ರ ಸುಮಾರಿಗೆ ಪಿರ್ಯಾದಿ ಪ್ರಭಾ

ರವರು  ಠಾಣಗೆ ಹಾಜರಾಗಿ ಗಾಯಾಳು ನಾಗರತ್ನ ರವರು ಮೃತ ಪಟ್ಟಿರುವ ಬಗ್ಗೆ ಲಿಖಿತ ದೂರು ಅರ್ಜಿಯನ್ನು ನೀಡಿದ್ದು ಸದರಿ ದೂರನ್ನು ಸ್ವೀಕರಿಸಿಕೊಂಡು ತನಿಖೆಯನ್ನು ಮುಂದುವರೆಸಿ ಹೆಚ್ಚಿನ ಕಲಂ 302 ಐಪಿಸಿ ಅಳವಡಿಸಿಕೊಳ್ಳುವಂತೆ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೆನು. ಸಾಕ್ಷಿದಾರರು ಲಿಖಿತ ದೂರು ಅರ್ಜಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.10 ಎಂದು ಗುರುತಿಸಲ್ಪಟ್ಟಿದು, ಸಾಕ್ಷಿದಾರರ ಸಹಿಯನ್ನು ನಿಪಿ.10 (ಬಿ) ಎಂದು ಗುರುತಿಸಲಾಯಿತು. ಸಾಕ್ಷಿದಾರರು ನಿವೇದನೆಯನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ–22** ಎಂದು, ಸಾಕ್ಷಿದಾರರ ಸಹಿಯನ್ನು **ನಿಪಿ–22(ಎ)** ಎಂದು ಗುರುತಿಸಲಾಯಿತು. ನಂತರ ಅದೇ ದಿನ ಮೈಸೂರು ಮೆಡಿಕಲ್ ಕಾಲೇಜು ಶವಗಾರಕ್ಕೆ ತೆರಳಿ ಪಂಚರಾದ ಹರೀಶ್, ರಮ್ಯ ಮತ್ತು ಶ್ರೀಕಾಂತ್ ರವರನ್ನು ಬರಮಾಡಿಕೊಂಡು ಶವ ಪಂಚನಾಮೆಯನ್ನು ಬೆಳಗ್ಗೆ 9.30 ರಿಂದ 11.30 ರವರೆಗೆ ಮಾಡಿದ್ದೆನು. ಸಾಕ್ಷಿದಾರರು ಶವ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.15 ಎಂದು ಗುರುತಿಸಲ್ಪಟ್ಟಿದು, ಸಾಕ್ಷಿದಾರರ ಸಹಿಯನ್ನು **ನಿಪಿ.15(ಡಿ)** ಎಂದು ಗುರುತಿಸಲಾಯಿತು. ಅದೇ ವೇಳೆಯಲ್ಲಿ ರಕ್ತಸಂಬಂಧಿಗಳಾದ ಪ್ರಿಯಾಂಕ, ಪೂಜ ಮತ್ತು ಸುಖ್ಯ ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೆನು. ಶವ ಪರೀಕ್ಷಾ ಸಂಬಂಧ ವೈದ್ಯರಿಗೆ ನಿವೇದಿಸಿಕೊಂಡಿದ್ದೆನು. ಶವ ಪರೀಕ್ಷಾ ನಂತರ ಶವವನ್ನು ಅವರ ವಾರಸುದಾರರಿಗೆ ಹಸ್ತಾಂತರಿಸಿದ್ದೆನು.

ದಿನಾಂಕ 26.08.2019 ರಂದು ಕೃತ್ಯ ನಡೆದ ಸ್ಥಳದ ನಕಾಶೆ ತಯಾರಿಸಿಕೊಡುವಂತೆ ಪಿ.ಡಬ್ಲ್ಯೂಡಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿಕೊಂಡಿದ್ದೆನು. ದಿನಾಂಕ 11.09.2019 ರಂದು ಪಿಸಿ *750* ಸಂತೋಷ್ ಆರಾಧ್ಯ ರವರು ಶವ ಪರೀಕ್ಷಾ ವೇಳೆಯಲ್ಲಿ ವೈದ್ಯರು ಸಂಗ್ರಹಿಸಿ ಕೊಟ್ಟಿದ್ದ ಮೃತಳ ಭಾಂಗಿಗಳನ್ನು ತಂದು ಹಾಜರುಪಡಿಸಿದ್ದು ಅವುಗಳನ್ನು ಸ್ವೀಕರಿಸಿ ಮಾಲು ಪಟ್ಟಿ ಸಂಖ್ಯೆ 54/2019 ರಂತೆ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೆನು. ಅದೇ ದಿನ *RFSL* ಅಧಿಕಾರಿಗಳಿಗೆ ರಾಸಯಾನಿಕ ಪರೀಕ್ಷೆ ಸಂಬಂಧ ಸದರಿ ವಸ್ತುಗಳನ್ನು ಕಳುಹಿಸಿಕೊಟ್ಟಿದ್ದೆನು. ಅದೇ ದಿನ ಶವ ಪರೀಕ್ಷಾ ವರದಿಯನ್ನು ಸ್ವೀಕರಿಸಿದ್ದೆನು. ಸಾಕ್ಷಿದಾರರು ಶವ ಪರೀಕ್ಷಾ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.1 ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿದಾರರ ಸಹಿಯನ್ನು ನಿಪಿ.1(ಡಿ) ಎಂದು ಗುರುತಿಸಲಾಯಿತು. ನಿಪಿ-*1* ಅನ್ನು ಪಡೆದುಕೊಂಡ ವೇಳೆಯಲ್ಲಿ ವೈದ್ಯರು ಅಂತಿಮ ಅಭಿಪ್ರಾಯ ವರದಿಯನ್ನು ನೀಡಿರಲಿಲ್ಲ.

ದಿನಾಕ *16.10.2019* ರಂದು *RFSL* ನಿಂದ ವರದಿಯನ್ನು ಸ್ವೀಕರಿಸಿದ್ದೆನು. ಸಾಕ್ಷಿದಾರರು *RFSL* ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ. 3 ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿದಾರರ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು.

ದಿನಾಂಕ *17.10.2019* ರಂದು ಕೃತ್ಯ ನಡೆದ ಸ್ಥಳ ದ ನಕ್ಷೆಯನ್ನು ಸಹಾಯಕ

ಕಾರ್ಯಪಾಲಕ ಇಂಜಿನಿಯರ್ ರವರಿಂದ ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡಿದ್ದೆನು. ಸಾಕ್ಷಿದಾರರು ಸ್ಥಳ ನಕಾಶೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ–*2* ಎಂದು ಗುರುತಿಸಲ್ಪಟ್ಟಿರುತ್ತದೆ.

ದಿನಾಂಕ *12.11.2019* ರಂದು ಕೆ.ಆರ್. ಆಸ್ಪತ್ರೆಯ ವೈದ್ಯರಿಂದ ಸಾವಿನ ಅಂತಿಮ ವರದಿಯ ಅಭಿಪ್ರಾಯವನ್ನು ಪಡೆದುಕೊಳ್ಳುವ ಸಲುವಾಗಿ *RFSL* ವರದಿ ಕಳುಹಿಸಿಕೊಟ್ಟಿದ್ದು ಸದರಿಯವರು *RFSL* ವರದಿ ಯನ್ನು ಸ್ವೀಕರಿಸಿ ಸಾವಿನ ಅಂತಿಮ ವರದಿಯನ್ನು ನಿಪಿ–*1* ರಲ್ಲಿ ನೀಡಿದ್ದರು. ಸಾಕ್ಷಿದಾರರು ಸಾವಿನ ಅಂತಿಮ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–*1(ಇ)* ಎಂದು ಗುರುತಿಸಲಾಯಿತು.

ನಾನು ಕೃತ್ಯ ನಡೆದ ಸ್ಥಳ ಕ್ಕೆ ಭೇಟಿ ಕೊಟ್ಟಾಗ ಆಭಾರಣಗಳಿಗೆ ಸಂಬಂಧಪಟ್ಟಂತೆ ಪಿರ್ಯಾದುದಾರರು ದಾಖಲಾತಿಗಳನ್ನು ಹಾಜರುಪಡಿಸಿದ್ದರು. ಸಾಕ್ಷಿದಾರರು *7* ಬಳೆಗಳಿಗೆ ಸಂಬಂಧಪಟ್ಟಂತೆ *4* ಬಿಲ್ಲುಗಳು ಮತ್ತು ಇನ್ಸುರೆನ್ಸ್ ಕಾಪಿ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ–*23* ರಿಂದ *27* ಎಂದು ಗುರುತಿಸಲಾಯಿತು. ಸಾಕ್ಷಿದಾರರ ಸಹಿಗಳನ್ನು ನಿಪಿ–*23(ಎ)* ಇಂದ *27(ಎ)* ಎಂದು ಗುರುತಿಸಲಾಯಿತು. ಸದರಿ ಬಳೆಗಳನ್ನು ರಾಜೇಶ್ ಎನ್ನುವ ಅಪ್ರೈಸರ್ ರವರಿಂದ ತೂಕ ಮಾಡಿಸಿ ಆ ಬಳೆಗಳ ತೂಕದ ಬಗ್ಗೆ ದಾಖಲೆ ಪಡೆದುಕೊಂಡಿದ್ದೆನು. ಸಾಕ್ಷಿದಾರರು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ–*17* ಎಂದು ಗುರುತಿಸಲ್ಪಟ್ಟಿದ್ದು ಸಾಕ್ಷಿದಾರರ ಸಹಿಯನ್ನು ನಿಪಿ–

*17(ಬಿ)* ಎಂದು ಗುರುತಿಸಲಾಯಿತು ಮತ್ತು ಅವರ ಹೇಳಿಕೆಯನ್ನು ಪಡೆದುಕೊಂಡಿದ್ದೆನು. ಅಲ್ಲದೆ ಪಂಚ ಸಾಕ್ಷಿದಾರರಾದ ಚಂದ್ರಶೇಖರ್ ಮತ್ತು ಅಭಿಶೇಕ್ ರವರ ಹೇಳಿಕೆಯನ್ನು ಪಡೆದುಕೊಂಡಿದ್ದೆನು.

ಆರೋಪಿತನ ವಿರುದ್ದವಾಗಿ ಸಾಕಷ್ಟು ಸಾಕ್ಷಾಧಾರಗಳು ಕಂಡು ಬಂದಿದ್ದರಿಂದ ಆರೋಪಿತನ ವಿರುದ್ದವಾಗಿ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ *392, 450* ಮತ್ತು *302* ಐಪಿಸಿ ಪ್ರಕಾರ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದೆನು.

ಸಾಕ್ಷಿದಾರರು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ :**

ಮೃತ ನಾಗರತ್ನ ಕುಟುಂಬದಲ್ಲಿ ಆಸ್ತಿಯ ವಿಚಾರವಾಗಿ ವ್ಯಾಜ್ಯ ನಡೆಯುತ್ತಿದ್ದು ಆ ಬಗ್ಗೆ ವಿಚಾರಣೆಯನ್ನೇನಾದರೂ ಮಾಡಿದ್ದೀರಾ ಎಂದರೆ ಆ ಬಗ್ಗೆ ನನ್ನ ಗಮನಕ್ಕೆ ಬಂದಿರಲಿಲ್ಲ. ನಾನು ಆ ಬಗ್ಗೆ ಮಾಹಿತಿ ಪಡೆಯಲು ಪ್ರಯತ್ನ ಪಟ್ಟಿದ್ದೆ ಆದರೆ ಯಾವುದೇ ಮಾಹಿತಿ ಸಿಕ್ಕಿರಲಿಲ್ಲ. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನು ಕೋರ್ಟ್ ಎದುರುಗಡೆ ಹಣ್ಣಿನ ವ್ಯಾಪಾರ ಮಾಡುತ್ತಿದ್ದನು ಎಂದರೆ ಇರಬಹುದು. ಆರೋಪಿತನು ಕಳೆದ 15-20 ವರ್ಷಗಳಿಂದ ಹಣ್ಣಿನ ಗಾಡಿಯನ್ನು ಮೃತ ನಾಗರತ್ನ ರವರ ಮಳಿಗೆಯಲ್ಲಿ ಇಡುತ್ತಿದ್ದನು ಎಂದರೆ ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಈ ಬಗ್ಗೆ ಅರೋಪಿತನು

ಪ್ರತಿದಿವಸ 70/- ರೂ ಬಾಡಿಗೆ ಕೊಡುತ್ತಿದ್ದು ಎಂದರೆ ಸರಿಯಲ್ಲ. ಆರೋಪಿತನು ಮೃತ ನಾಗರತ್ನ ರವರ ಮಳಿಗೆಯಲ್ಲಿ ಹಣ್ಣಿನ ಗಾಡಿಯನ್ನು ನಿಲ್ಲಿಸುತ್ತಿದ್ದರ ಬಗ್ಗೆ ಮತ್ತು ನೆಲ ಬಾಡಿಗೆ ಕೊಡುತ್ತಿದ್ದರ ಬಗ್ಗೆ ನಾನು ಯಾವುದೇ ತನಿಖೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ ತನಿಖೆ ಮಾಡಿದ್ದೆ ಯಾವುದೇ ಮಾಹಿತಿ ದೊರಕಿರಲಿಲ್ಲ. ನಾನು ಪಡೆದುಕೊಂಡಿರುವ ಸಾಕ್ಷಿದಾರರ ಹೇಳಿಕೆಯಲ್ಲಿ ಆರೋಪಿತನು ಮೃತ ನಾಗರತ್ನ ರವರ ಮಳಿಗೆಯಲ್ಲಿ ಹಣ್ಣಿನ ಗಾಡಿಯನ್ನು ನಿಲ್ಲಿಸುತ್ತಿದ್ದರ ಬಗ್ಗೆ ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಾಗರತ್ನ ಕುಟುಂಬದವರು ಆರೋಪಿತನಿಗೆ ನೀನು ಆ ಸ್ಥಳ ವನ್ನು ಖಾಲಿ ಮಾಡಿಕೊಡು ನಾವು ಭಾಗ ಮಾಡಿಕೊಡಬೇಕು ಎಂದು ಹೇಳಿ ಒತ್ತಡ ತರುತ್ತಿದ್ದರು ಎಂದರೆ ಸರಿಯಲ್ಲ. ಅದಕ್ಕೆ ಆರೋಪಿತನು ಕಾಲವಕಾಶವನ್ನು ಕೇಳಿದ್ದರಿಂದ ಸುಳ್ಳು ದೂರನ್ನು ನೀಡಿದ್ದರು ಎಂದರೆ ಸರಿಯಲ್ಲ. ನಾನು ನಾಗರತ್ನ ಕುಟುಂಬದ ಬಗ್ಗೆ ಸರಿಯಾಗಿ ತನಿಖೆ ಮಾಡಿದ್ದರೆ ಆ ಬಗ್ಗೆ ಸತ್ಯಾಂಶ ಗೊತ್ತಾಗುತ್ತಿತ್ತು ಎಂದರೆ ಸರಿಯಲ್ಲ. ದೂರಿನಲ್ಲಿ ನಾಗರತ್ನ  ರವರಿಗೆ ಬಾಯಿ ಮುಚ್ಚಿ ಬಳೆ ಕಿತ್ತುಕೊಂಡು ಹೋಗಿದ್ದರ ಬಗ್ಗೆ ಉಲ್ಲೇಖ ಇರುತ್ತದೆ ಎಂದರೆ ಸರಿ. ನಾನು ದೂರು ಪಡೆದುಕೊಂಡ ಮೇಲೆ ನಾಗರತ್ನ ರವರ ಆರೋಗ್ಯದ ಬಗ್ಗೆ ವಿಚಾರಣೆ ಮಾಡಿದ್ದೆ. ನಾನು ನಾಗರತ್ನ ರವರನ್ನು ಅವರ ಆರೋಗ್ಯದಲ್ಲಿ ಸರಿ ಇತ್ತು ಎಂದರೆ ಸರಿಯಲ್ಲ. ನಾನೇ ಆಸ್ಪತ್ರೆಗೆ ಸೇರಿಸುವಂತೆ ಪಿರ್ಯಾದುದಾರರಿಗೆ ಹೇಳಿದ್ದೆ. ನಾನು ಪಿರ್ಯಾದುದಾರರಿಗೆ ನಾಗರತ್ನ ರವರ ಚಿಕಿತ್ಸೆ ಬಗ್ಗೆ ಕೇಳಿದ್ದೆ ಜೆ.ಎಸ್.ಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸುತ್ತಿರುವ ಬಗ್ಗೆ

ಹೇಳಿದ್ದರು. ನಾಗರತ್ನ ರವರ ಚಿಕಿತ್ಸೆಯ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ. ನಾಗರತ್ನ ರವರಿಗೆ 80 ವರ್ಷಕ್ಕಿಂತ ಹೆಚ್ಚಿನ ವಯಸ್ಸು ಆಗಿತ್ತು ಎಂದರೆ ಇರಬಹುದು. ಅವರಿಗೆ ವಯಸ್ಸು ಆಗಿದ್ದರಿಂದ ವಯೋಸಹಕ ಕಾಯಿಲೆಗಳು ಇದ್ದವು ಎಂದರೆ ಸರಿಯಲ್ಲ. ನಾಗರತ್ನ ರವರು ಹಿಂದೆ ಆರೋಗ್ಯ ವಾಗಿ ಇದ್ದರು ಎಂದು ಹೇಳಿದ್ದರಿಂದ ಯಾವುದೇ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ. ಶವ ಪರೀಕ್ಷಾ ವರದಿಯಲ್ಲಿ ಹೃದಯಾಘಾತ ಆಗಿ ಮರಣ ಹೊಂದಿರುತ್ತಾರೆ ಅಂತ ಉಲ್ಲೇಖ ಇರುತ್ತದೆ ಎಂದರೆ ಸರಿ, ಆ ವೇಳೆಯಲ್ಲಿ RFSL ವರದಿ ಬಂದಿರಲಿಲ್ಲ. RFSL ವರದಿ ಬಂದ ಮೇಲೆ ಸಾವಿನ ಅಂತಿಮ ಅಭಿಪ್ರಾಯವನ್ನು ಕೊಟ್ಟಿದ್ದರು. ದಿನಾಂಕ 28.10.2019 ರಂದು ವೈದ್ಯರು ತಮ್ಮ ಅಂತಿಮ ಅಭಿಪ್ರಾಯವನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ. ದಿನಾಂಕ 28.10.2019 ರಂದು ವೈದ್ಯರು ಕೊಟ್ಟಿರುವ ಶವ ಪರೀಕ್ಷಾ ವರದಿಯಲ್ಲಿ ಅಂತಿಮ ಅಭಿಪ್ರಾಯವನ್ನು ಕೊಡುತ್ತೇನೆ ಅಂತ ಉಲ್ಲೇಖಿಸಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 12.11.2019 ರಂದು ವೈದ್ಯರು ನನ್ನ ಕೋರಿಕೆಯ ಮೇರೆಗೆ ವೈದ್ಯರು ಅಂತಿಮ ಅಭಿಪ್ರಾಯವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ತನಿಖೆಯ ಭಾಗವಾಗಿ ವೈದ್ಯರು ಅಂತಿಮ ಅಭಿಪ್ರಾಯವನ್ನು ಕೊಟ್ಟಿರುತ್ತಾರೆ. ಅಂತಿಮ ಅಭಿಪ್ರಾಯದಲ್ಲಿ ಸಹ "Due to stress caused by assault" ಅಂತ ಉಲ್ಲೇಖ ಇರುತ್ತದೆ ಎಂದರೆ ಸರಿ. ಹಲ್ಲೆಗೆ ಸಂಬಂಧಪಟ್ಟಂತೆ ತನಿಖೆ ಮಾಡಿರುತ್ತೇನೆ. ಗಾಯಾಳು ತನ್ನ ಹೇಳಿಕೆಯಲ್ಲಿ ಆರೋಪಿತನು ಹಿಡಿದು ಎಳೆದಾಡಿದ್ದರ

ಬಗ್ಗೆ ಮತ್ತು ಬಲವಂತವಾಗಿ ಬಾಯಿಗೆ ಬಟ್ಟೆ ತುರುಕಿದ್ದರ ಬಗ್ಗೆ ಉಲ್ಲೇಖ ಇರುತ್ತದೆ. ಹಲ್ಲೆಗೆ ಸಂಬಂಧಪಟ್ಟಂತೆ ಚಿಕಿತ್ಸೆ ಪಡೆದುಕೊಂಡ ಬಗ್ಗೆ ಯಾವುದೇ ದಾಖಲೆ ಪಡೆದುಕೊಂಡಿರುವುದಿಲ್ಲ ಅಂದರೆ ಸರಿಯಲ್ಲ.

ನಾಗರತ್ನ ರವರು ದಿನಾಂಕ 23.08.2019 ರವರೆಗೆ ಆರೋಗ್ಯ ವಾಗಿ ಇದ್ದರು ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದರು. ನಾಗರತ್ನಮ್ಮರವರು ಆರೋಗ್ಯ ವಾಗಿ ಇದ್ದು ಯಾವುದೇ ಚಿಕಿತ್ಸೆ ಪಡೆದುಕೊಂಡಿಲ್ಲ ನಾನು ಆ ಬಗ್ಗೆ ಯಾವುದೇ ತನಿಖೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾಗರತ್ನ ರವರು ಜೆ.ಎಸ್.ಎಸ್. ಆಸ್ಪತ್ರೆಗೆ ಹೋಗುವ ಪೂರ್ವದಲ್ಲಿಯೇ ಮರಣಹೊಂದಿದ್ದರು ಎಂದರೆ ಸರಿಯಲ್ಲ. ವೈದ್ಯರು ಗಾಯಾಳು ನಾಗರತ್ನಮ್ಮ ರವರು ಜೆ.ಎಸ್.ಎಸ್. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದರ ಬಗ್ಗೆ Discharge summary ಪಡೆದುಕೊಂಡು ಶವ ಪರೀಕ್ಷೆ ಮಾಡಿದ್ದರು. ಜೆ.ಎಸ್.ಎಸ್ ಆಸ್ಪತ್ರೆಯ ಚಿಕಿತ್ಸೆಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ ಆದರೆ ವೈದ್ಯರು ಪಡೆದುಕೊಂಡಿದ್ದರು. ನಾಗರತ್ನಮ್ಮ ರವರು ಜೆ.ಎಸ್.ಎಸ್. ಆಸ್ಪತ್ರೆಯಲ್ಲಿ ಯಾವುದೇ ಚಿಕಿತ್ಸೆ ಪಡೆದುಕೊಂಡಿರಲಿಲ್ಲ ಅದೇ ಕಾರಣಕ್ಕಾಗಿ ನಾನು ನ್ಯಾಯಾಲಯಕ್ಕೆ ಯಾವುದೇ ಚಿಕಿತ್ಸೆಯ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾಗರತ್ನಮ್ಮ ಮರಣಹೊಂದುವವರೆಗೆ ಅವರ ಕುಟುಂಬದವರಾಗಲೀ ಅಥವಾ ಪೊಲೀಸ್ ಠಾಣೆಯವರಾಗಲೀ ಯಾವುದೇ ಚಿಕಿತ್ಸೆ ಕೊಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಾಗರತ್ನಮ್ಮ ತಮ್ಮ ವಯೋ ಕಾಯಿಲೆಗಳಿಗೆ ಸಂಬಂಧಪಟ್ಟಿರುತ್ತಾರೆಯೇ ಹೊರತು ಯಾವುದೇ ಹಲ್ಲೆ ಮತ್ತು ಕಳ್ಳತನಕ್ಕೆ ಸಂಬಂಧಪಟ್ಟಂತೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸರಿಯಾಗಿ ತನಿಖೆ ಮಾಡಿದ್ದರೆ ಈ ವಿಚಾರ ನನಗೆ ಗೊತ್ತಾಗುತ್ತಿತ್ತು ಎಂದರೆ ಸರಿಯಲ್ಲ.

ಪುಷ್ಪ ಮತ್ತು ಪ್ರಿಯಾಂಕ ಮೋಹನ್ ಅಯ್ಯರ್ ರವರಿಗ ಸಂಬಂಧಪಟ್ಟಂತೆ ಬಿಲ್ಲುಗಳನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿ, ಅವರುಗಳು ಮೃತ ನಾಗರತ್ನಮ್ಮ ರವರ ಸಂಬಂಧಿಕರು ಇದ್ದರು. ನಾನು ಅಮಾನತ್ತು ಪಡಿಸಿಕೊಂಡಿದ್ದೆ ಅಂತ ಹೇಳುವ 7 ಬಳೆಗಳು ಮೃತ ನಾಗರತ್ನಮ್ಮ ರವರಿಗೆ ಸಂಬಂಧಪಟ್ಟ ಬಳೆಗಳು ಇದ್ದವು ಎಂದು ಯಾವುದೇ ದಾಖಲೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. 7 ಬಳೆಗಳು ಮೃತ ನಾಗರತ್ನಮ್ಮ ರವರಿಗೆ ಹೇಗೆ ಬಂದಿದ್ದವು ಎಂದು ತನಿಖೆ ಮಾಡಿದ್ದೆ ಆ ತನಿಖೆಯಲ್ಲಿ ಮೃತ ನಾಗರತ್ನಮ್ಮ ಸಂಬಂಧಿಕರಿಂದ ಪಡೆದುಕೊಂಡಿರುವ ಬಗ್ಗೆ ಗೊತ್ತಾಗಿತ್ತು. ನಾನು ಈ ಬಗ್ಗೆ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಆದರೆ ವಿಚಾರಣೆ ಸಮಯದಲ್ಲಿ ಹೇಳಿದ್ದರು. ನಿಪಿ–17 ರಲ್ಲಿ ಹೇಳಿರುವ ತೂಕಕ್ಕೂ ಮತ್ತು ನಿಪಿ–23 ರಿಂದ 26 ರ ದಾಖಲೆಗಳಲ್ಲಿ ಹೇಳಿರುವ ತೂಕಕ್ಕೂ ವ್ಯತ್ಯಾಸ ಇರುತ್ತದೆ ಎಂದರೆ ಸರಿ, ಸಂಪೂರ್ಣವಾದಂತಹ ದಾಖಲೆಗಳು ಸಿಕ್ಕಿರಲಿಲ್ಲ ಲಭ್ಯವಾದಂತಹ ದಾಖಲೆಗಳನ್ನು ಪಡೆದುಕೊಂಡಿದ್ದೆ. ನಾನು 7 ಬಂಗಾರದ ಬಳೆಗಳ ಸಂಬಂಧ ಪೂರ್ಣ ವಿಚಾರಣೆ ಮಾಡಿರಲಿಲ್ಲ ಎಂದರೆ ಸರಿಯಲ್ಲ. ನಾಗರತ್ನಮ್ಮ ರವರ ಸಂಬಂಧಿಕರು ಉದ್ದೇಶ

ಪೂರ್ವಕವಾಗಿ ಕಂಪ್ಲೇಂಟ್ ಕೊಡುವ ಕಾಲಕ್ಕೆ ಬಳೆಗಳನ್ನು ಸೇರಿಸಿರುತ್ತಾರೆ ಎಂದರೆ ಸರಿಯಲ್ಲ.

ಮಹಜರ್ ಮುಖಾಂತರ ಬಳೆಗಳನ್ನು ಅಮಾನತ್ತು ಪಡಿಸಿಕೊಂಡಿದ್ದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾಗರತ್ನಮ್ಮ ಕುಟುಂಬದವರು ಆ ಬಳೆಗಳನ್ನು ಒದಗಿಸಿಕೊಟ್ಟಿದ್ದರು ಎಂದರೆ ಸರಿಯಲ್ಲ. ಆರೋಪಿತನು ಮೃತ ನಾಗರತ್ನ ಕಡೆಯಿಂದ ಬಳೆಗಳನ್ನು ಕಸಿದುಕೊಂಡಿರುವುದಿಲ್ಲ ಪ್ರಕರಣಕ್ಕೋಸ್ಕರ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಿಡಿ ಯಲ್ಲಿ ಇರುವ ದೃಶ್ಯಾವಳಿಗಳನ್ನು ನೋಡಿದರೆ ಗುರುತಿಸಬಹುದು. ಸಿಡಿಯಲ್ಲಿ ಕಾಣಿಸುವಂತಹ ದೃಶ್ಯಾವಳಿಗಳ ಸಮಯಕ್ಕೂ ಮತ್ತು ದೋಷಾರೋಪಣಾ ಪತ್ರದಲ್ಲಿ ಇರುವ ತನಿಖಾ ದಾಖಲೆಗಳ ಸಮಯಗಳಲ್ಲಿ ವ್ಯತ್ಯಾಸ ಇರುತ್ತದೆ ಎಂದರೆ ಸರಿ, ಆದರೆ ಸಾಂಧರ್ಬಿಕ ಸಾಕ್ಷಿಗಳಲ್ಲಿ ಸಿಡಿಯಲ್ಲಿರುವ ದೃಶ್ಯಾವಳಿಗಳು ಸಹ ಒಂದು ಸಾಕ್ಷಿ ಇರುತ್ತದೆ. ತನಿಖಾ ದಾಖಲೆಗಳಲ್ಲಿ ತೋರಿಸಿರುವ ಘಟನೆ ದಿನಾಂಕಕ್ಕೂ ಮತ್ತು ದೃಶ್ಯಾವಳಿಗಳಲ್ಲಿ ತೋರಿಸುವಂತಹ ದಿನಾಂಕಕ್ಕೂ ವ್ಯತ್ಯಾಸ ಇರುತ್ತದೆ ಎಂದರೆ ಸರಿ, ಸಿಸಿಟಿವಿಯಲ್ಲಿ ಇದ್ದಂತಹ ದೃಶ್ಯಾವಳಿಗಳ ದಿನಾಂಕವನ್ನು ಬದಲಿಸಿರಬಹುದು. ಸಿಡಿಯಲ್ಲಿರುವ ದೃಶ್ಯಾವಳಿಗಳಲ್ಲಿ ದಿನಾಂಕ ವ್ಯತ್ಯಾಸ ಕಾಣುತ್ತಿದೆ ಎನ್ನುವ ಬಗ್ಗೆ ಅದೇ ದಿವಸ ನನಗೆ ಗೊತ್ತಾಗಿತ್ತು. ಮಹಜರ್ ನಲ್ಲಿ ಆ ಬಗ್ಗೆ ತೋರಿಸಿರುವುದಿಲ್ಲ. ನಾನು ಸರಿಯಾಗಿ ತನಿಖೆ ಮಾಡಿದ್ದರೆ ನಿಜವಾದ ಮಾಹಿತಿ ಲಭ್ಯವಾಗುತ್ತಿತ್ತು ಆದರೂ ಸಹ ನಾನು ಸರಿಯಾಗಿ

ತನಿಖೆ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತನು ಹಣ್ಣಿನ ವ್ಯಾಪಾರ ಮಾಡುತ್ತಿದ್ದ ಬಗ್ಗೆ ಗೊತ್ತಾಗಿತ್ತು ಆದರೆ ಹಣ್ಣಿನ ವ್ಯಾಪಾರ ಮಾಡುವ ಗಾಡಿಯನ್ನು ನಾಗರತ್ನಮ್ಮ ರವರ ಮನೆಯಲ್ಲಿ ಇಟ್ಟುಕೊಳ್ಳುವ ಬಗ್ಗೆ ಗೊತ್ತಿಲ್ಲ. ಈ ಬಗ್ಗೆ ದೂರು ಮತ್ತು ಹೇಳಿಕೆಯಲ್ಲಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಘಟನೆ ಆಗಿತ್ತು ಎಂದು ಹೇಳುವ ಸಮಯದಲ್ಲಿ ಪಿರ್ಯಾದುದಾರರ ಗಂಡ ಮನೆಯಲ್ಲಿಯೇ ಇದ್ದರು ಎಂದರೆ ಸರಿ ಅವರನ್ನು ನಾನು ವಿಚಾರಣೆ ಮಾಡಿದ್ದೆ. ನಾನು ವಿಚಾರಣೆ ಮಾಡಿದ ಕಾಲಕ್ಕೆ ಪಿರ್ಯಾದುದಾರರ ಗಂಡ ತಾನು ವಾಯುವಿಹಾರಕ್ಕೆ ಹೋಗಿದ್ದೆ ಎಂದು ಹೇಳಿದ್ದರು. ಮತ್ತು ವಾಯುವಿಹಾರಕ್ಕೆ ಹೋಗಿ ಬಂದಿರುವ ಬಗ್ಗೆ ಹೇಳಿದ್ದರು ಆದರೆ ಯಾವ ಸಮಯಕ್ಕೆ ವಾಪಸ್ಸು ಬಂದಿದ್ದರು ಎಂದು ಹೇಳಿರಲಿಲ್ಲ. ನಾನು ಪಿರ್ಯಾದುದಾರರ ಗಂಡ ವಾಯುವಿಹಾರಕ್ಕೆ ಹೋಗಿದ್ದರ ಬಗ್ಗೆಯಾಗಲೀ ವಾಪಸ್ಸು ಎಷ್ಟು ಗಂಟೆಗೆ ಬಂದರು ಎಂದಾಗಲೀ ಸರಿಯಾಗಿ ತನಿಖೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಪಿರ್ಯಾದುದಾರರು ಕೊಟ್ಟಂತಹ ಪಿರ್ಯಾದಿ ಆಯಾಮದ ಮೇಲೆಯೇ ತನಿಖೆ ಮಾಡಿರುತ್ತೇನೆಯೇ ಹೊರತು ಆತನ ಗಂಡ ನೀಡಿರುವಂತಹ ಹೇಳಿಕೆ ಮತ್ತು ಘಟನಾ ಸ್ಥಳ ದಲ್ಲಿ ಇದ್ದ ಬಗ್ಗೆ ತನಿಖೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸರಿಯಾಗಿ ತನಿಖೆ ಮಾಡಿದ್ದರೆ ಆರೋಪಿತನು ನಿರಪರಾಧಿ ಎಂದು ನನಗೆ ಗೊತ್ತಾಗುತ್ತಿತ್ತು ಎಂದರೆ ಸರಿಯಲ್ಲ. ಪಿರ್ಯಾದುದಾರರ ಕುಟುಂಬದ ವ್ಯಾಜ್ಯದಲ್ಲಿ ಆರೋಪಿತರನ್ನು ಅವರ ಮಳಿಗೆಯಿಂದ ಬಿಡಿಸಬೇಕು ಎನ್ನುವ ಉದ್ದೇಶದಿಂದ

ಕೊಟ್ಟಂತಹ ಸುಳ್ಳು ಪಿರ್ಯಾದನ್ನು ದಾಖಲು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಿಸಿಟಿವಿ ದೃಶ್ಯಾವಳಿಗಳನ್ನು ನೋಡಿ ಸಿಡಿಗೆ ಕಾಪಿ ಮಾಡಿಸಿಕೊಂಡಿದ್ದೆ. ಆ ವೇಳೆಯಲ್ಲಿ ದಿನಾಂಕ ಮತ್ತು ಸಮಯದಲ್ಲಿ ವ್ಯತ್ಯಾಸ ಆಗಿರುವುದು ಗಮನಕ್ಕೆ ಬಂದಿರಲಿಲ್ಲ. ನಾನು ಸರಿಯಾದ ರೀತಿಯಲ್ಲಿ ತನಿಖೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಠಾಣೆಯಲ್ಲಿಯೇ ಮಹಜರ್ ಗೆ ಸಹಿ ಮಾಡಿಸಿಕೊಂಡಿದ್ದೆ ಎಂದರೆ ಸರಿಯಲ್ಲ. ನಾನು ಆರೋಪಿತನ ಸ್ವ ಇಚ್ಛಾ ಹೇಳಿಕೆಯನ್ನು ಬಲವಂತವಾಗಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**